ಚರ್ಚಿಸುತ್ತ ಬಂದಿದ್ದಾರೆ. ಪ್ರತಿಮಾಚಿಂತನೆಯ ಸಂಬಂಧದಲ್ಲಿ ಜರ್ಮನ್ ವಿಮರ್ಶಕರ ಹಲವು ಅಮೂಲ್ಯ ವಿಚಾರಗಳು ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಇಲ್ಲಿ ಚರ್ಚಿತವಾಗಿವೆ. ಈ ಎಲ್ಲ ಪ್ರಮುಖ ವಿಚಾರಗಳನ್ನೂ ಇಲ್ಲಿ ಸಂಗ್ರಹಿಸಿ ಲೇಖಕರು ತಮ್ಮ ಪ್ರತಿಫಲನಗಳನ್ನು ನೀಡಿದ್ದಾರೆ.

'ಆಧುನಿಕ ಕನ್ನಡ ಕವಿಗಳಲ್ಲಿ ಪ್ರತಿಮಾ ವಿನ್ಯಾಸ' ಇದು ಭಟ್ಟರ ಪಿಎಚ್.ಡಿ. ಪ್ರಬಂಧ. ಅದು ಬಹಳ ಸೀಮಿತ ಬರಹವೆಂದು ಮುಂದಿನ ದಿನಗಳಲ್ಲಿ ಅವರಿಗೆ ಕಂಡಿತು. ಅದಕ್ಕಾಗಿ ಅವರು ಒಂದು ವಿಸ್ತೃತ ಅಧ್ಯಯನ ಕೈಕೊಂಡರು. ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡದ ಶ್ರೇಷ್ಠ ಕವಿಗಳ ಸಾಹಿತ್ಯ, ಚಿಂತನೆಗಳನ್ನು ಅವರು ಅಧ್ಯಾಪನದ ಸಲುವಾಗಿಯೂ ಓದಲೇಬೇಕಾಗಿತ್ತು. ಹಾಗಾಗಿ ಅವರು ಕಾವ್ಯಪ್ರತಿಮೆಗಳ ಕುರಿತಾದ ತಮ್ಮ ಈ ಹೆಚ್ಚಿನ ಅಧ್ಯಯನಕ್ಕೆ ಮುಖ್ಯವಾಗಿ ಈ ಮೂರೂ ಭಾಷೆಗಳ ಸಾಹಿತ್ಯ ಚಿಂತನೆಗಳಿಂದ ಬಲ ಪಡೆದುಕೊಂಡರು. (ಎಲಿಯಟ್, ಶೇಕ್ಸ್‌ಪಿಯರ್, ಏಟ್ಸ್‌ರಂಥ ಯುಗದ ಮಹತ್ವದ ಲೇಖಕರ ಕಾವ್ಯವನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದೂ ಈ ಸಾಹಸದ ಒಂದು ಭಾಗವೆಂದರೆ ತಪ್ಪಾಗಲಾರದು). ಪ್ರತಿಮೆ ಎಂಬ ಪದವನ್ನು ಶಬ್ದಚಿತ್ರ ಎಂಬ ಉದಾರ ಅರ್ಥದಲ್ಲಿ ಸ್ವೀಕರಿಸಿ, ಸರಳ ಚಿತ್ರ, ಉಪಮೆ, ರೂಪಕ, ಪ್ರತೀಕಗಳನ್ನು ಪ್ರತಿಮಾವಲಯದ ಬೇರೆ ಬೇರೆ ಪ್ರಭೇದಗಳಾಗಿ ಇಲ್ಲಿ ನಿರೂಪಿಸಲಾಗಿದೆ. ಪ್ರತಿಮಾ ಪರಿಕಲ್ಪನೆಯ ಚಾರಿತ್ರಿಕ ಬೆಳವಣಿಗೆ, ಅದರ ಸ್ವರೂಪ, ಸಾಮಗ್ರಿ, ಪ್ರತಿಮೆಯ ವಿವಿಧ ಹಂತಗಳು, ಪ್ರತಿಮಾತ್ಮಕ ಅಭಿವ್ಯಕ್ತಿಯ ಕುರಿತ ವಿಚಾರಗಳು ಈ ಎಲ್ಲವನ್ನೂ ವಿವೇಚಿಸುವ ಪ್ರಸ್ತುತ ಕೃತಿಯಲ್ಲಿ ಲೇಖಕರು ಕಡೆಯಲ್ಲಿ ಕೆಲವು ಗಮನಾರ್ಹ ಪ್ರತಿಮಾತ್ಮಕ ಕಾವ್ಯದ ನಿದರ್ಶನಗಳೊಂದಿಗೆ ಚರ್ಚೆ ಮುಂದುವರಿಸಿ ತಮ್ಮ ಅಧ್ಯಯನಕ್ಕೆ ಪ್ರಾಯೋಗಿಕ ವಿಸ್ತರಣೆಯನ್ನೂ ಒದಗಿಸಿದ್ದಾರೆ.

'ಸಾಹಿತ್ಯವೇ ಎಲ್ಲವೂ' ಎಂಬಂತೆ ಬಾಳಿದ ಈ ಕವಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯೂ ಸೇರಿದಂತೆ ಒಂದಷ್ಟು ಮುಖ್ಯ ಪ್ರಶಸ್ತಿಗಳು ಬಂದವು, ಇನ್ನೂ ಒಂದಷ್ಟು ಮಾನ್ಯತೆಗಳು ಬರಬಹುದಾಗಿದ್ದವು; ಬರಲಿಲ್ಲ. ಎಲ್ಲೆಂದರಲ್ಲಿ ಸಾಹಿತ್ಯದ ಪುಟ್ಟ ಕದನಕ್ಕೆ ಯಾವ ಕ್ಷಣದಲ್ಲೂ ಸಿದ್ಧರಾಗಿ ನಿಂತ ಪಟುಭಟರಂತೆ ಕಾಣುತ್ತಿದ್ದ ಭಟ್ಟರು ಹಾಗೇ ಸುಮ್ಮನೆ ಒಂದಷ್ಟು ಜನರ ಅಸಮಾಧಾನವನ್ನೂ ಗಳಿಸಿಕೊಂಡರು. ಆದರೆ, ನಿಜವಾಗಿಯೂ ಆ ಸಂದರ್ಭಗಳಿಗಿಂತ ಅವರು ದೊಡ್ಡವರಾಗಿದ್ದರು. 'ಸಹಜವಾಗಿದ್ದದ್ದು...' ಎಂಬ ಅವರ ಕವಿತೆಯ ಕಡೆಯ ಸಾಲುಗಳನ್ನು ನೋಡಿ:

ಸಹಜವಾಗಿದ್ದದ್ದು ಸರಿಯಾಗೂ ಇದ್ದೀತು,
ತಾನೇ ನಿರ್ಮಿಸಿಕೊಂಡಂತೆ ನದಿ ಪಾತ್ರ.

ನಿಜಜೀವನದಲ್ಲಿ ಅವರು ಹಾಗೆ ಸಹಜವಾಗಿ ಇದ್ದು ಹೋಗಿಬಿಡುವುದನ್ನು ಆಯ್ಕೆ ಮಾಡಿಕೊಂಡರೆಂದು ತೋರುತ್ತದೆ. ಅದು ಸರಿಯಾಗೂ ಇದ್ದೀತು. ಆದರೆ, ಅವರು ತೊಡಗಿಕೊಂಡು ಮಾಡಿದ ಸಾಹಿತ್ಯಿಕ ಕಾರ್ಯಗಳು ಮಾತ್ರವೇ ನಾಳೆ ಉಳಿಯುತ್ತವೆ ಎಂದು ಅವರಿಗೆ ತಿಳಿದಿತ್ತು.


**ಚಿಂತಾಮಣಿ ಕೊಡ್ಲೆಕೆರೆ**

ಕವಿ, ಕತೆಗಾರ, ಪ್ರಬಂಧಕಾರ, ವಿಮರ್ಶಕ ಚಿಂತಾಮಣಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರು. 'ಬಬ್ರುವಾಹನ ಎಂಬ ಇರುವೆ', 'ಮಾಯಾವಿ ಮಾಂಗಿ' ಅವರ ಕಥಾಸಂಗ್ರಹಗಳು, 'ಸಿಂಡ್ರೆಲಾ ಅಂಬ್ರೆಲಾ' ಮಕ್ಕಳ ಕವಿತೆಗಳ ಗುಚ್ಛ. 'ಅಂತರಂಗದ ಆಕಾಶ' ಸಂಶೋಧನಾ ಪ್ರಬಂಧ. 'ಮೊದಲ ಮನೆಯ ಮೆಟ್ಟಿಲು', 'ಟಪಾಲು ಬಸ್ಸು' ಪ್ರಬಂಧ ಸಂಗ್ರಹಗಳು. ಬಿಎಸ್‌ಎನ್‌ಎಲ್‌ನ ನಿವೃತ್ತ ಉದ್ಯೋಗಿ.